# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 72 |
| ಸದಸ್ಯರ ಹೆಸರು | ಶ್ರೀ ಎನ್. ಅಪ್ಪಾಜಿಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 02.02.2021 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಹೊಣಕೆರೆ ಹೋಬಳಿ, ಗಂಗಸಮುದ್ರ ಗ್ರಾಮದ ವ್ಯಾಪ್ತಿಯಲ್ಲಿ ಸರ್ವೆ ನಂ. 143 ರಲ್ಲಿ 2013-14 ಸಾಲಿನಲ್ಲಿ 65 ಎಕರೆ ಭೂಮಿಯನ್ನು ಸುರಕ್ಷಿತ ಗಣಿ ಕೈಗಾರಿಕಾ ವಲಯದಲ್ಲಿ ಮೀಸಲಿಟ್ಟ ಪ್ರದೇಶ 4(1) ಆಗಿರುವಂತಹ ಪ್ರದೇಶದಲ್ಲಿ ಅನಧಿಕೃತವಾಗಿ ಗಣಿಗಾರಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಯೇ; ಬಂದಿದ್ದಲ್ಲಿ; ಸರ್ಕಾರದ ಕ್ರಷರ್ ಮಾಲೀಕರು ಮತ್ತು ಸಂಬಂದಪಟ್ಟ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಂಡಿದೆ; (ವಿವರವಾದ ಮಾಹಿತಿಯನ್ನು ನೀಡುವುದು); ಗಂಗಸಮುದ್ರ ಎಲ್ಲೆ ಸರ್ವೆ ನಂ 143 ರ 65 ಎಕರೆ ಭೂ ಸುರಕ್ಷತಾಲಯಕ್ಕೆ ಮೀಸಲಿಟ್ಟಿರುವ 4(1) ಪ್ರತಿಯನ್ನು ಒದಗಿಸುವುದು). | ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಹೊಣಕೆರೆ ಹೋಬಳಿ, ಗಂಗಸಮುದ್ರ ಗ್ರಾಮದ ಸರ್ವೆ ನಂ. 143 ರಲ್ಲಿ 59-00 ಎಕರೆ ಸರ್ಕಾರಿ ಗೋಮಾಳ ಪ್ರದೇಶದಲ್ಲಿ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್ ಗಳ) ನಿಯಂತ್ರಣ ಅಧಿನಿಯಮ, 2011ರ ಪ್ರಕರಣ 3(2) ರಂತೆ ಅಧಿಸೂಚನೆ ಸಂಖ್ಯೆ ಎಂಎಸ್‌ಸಿ(1)/185/2009-10, ದಿನಾಂಕ 31.10.2012 ರಂದು ಸುರಕ್ಷಿತ ವಲಯ ಎಂದು ಘೋಷಣೆ ಮಾಡಿ 2012-13ನೇ ಸಾಲಿನಲ್ಲಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>**ಸದರಿ ಅಧಿಸೂಚನೆಯ ಪ್ರತಿಯನ್ನು ಲಗತ್ತಿಸಿದೆ.**<br>ಪ್ರಸ್ತುತ ಸದರಿ ಪ್ರದೇಶದಲ್ಲಿ ಅನಧಿಕೃತ ಗಣಿಗಾರಿಕೆ ನಡೆಯುತ್ತಿರುವುದಿಲ್ಲ.<br>ಗಂಗಸಮುದ್ರ ಗ್ರಾಮದ ಸರ್ವೆ ನಂ. 143ರಲ್ಲಿ ಕಲ್ಲುಗಣಿಗಾರಿಕೆಗೆ ಪರವಾನಿಗೆ ಪಡೆದಿರುವ ಕಲ್ಲುಗಣಿ ಗುತ್ತಿಗೆದಾರರು ಗುತ್ತಿಗೆ ಪ್ರದೇಶದಲ್ಲಿ ಹಾಗೂ ಗುತ್ತಿಗೆ ಪ್ರದೇಶದ ಹೊರಭಾಗದಲ್ಲಿ ಅತಿಕ್ರಮಣ ಮಾಡಿ ಕಲ್ಲುಗಣಿಗಾರಿಕೆ ನಡೆಸಿರುವ 02 ಪ್ರಕರಣಗಳು ಕಂಡು ಬಂದಿರುತ್ತವೆ.<br>1. ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಗಂಗಸಮುದ್ರ ಗ್ರಾಮದ ಸರ್ವೆ ನಂ. 143ರ 1-20 ಎಕರೆ ಸರ್ಕಾರಿ ಪ್ರದೇಶದಲ್ಲಿ ಮೆ॥ ಮಲೈಮಹದೇಶ್ವರ ಸ್ಟೋನ್ ಕ್ರಷರ್ಸ್ ಇವರಿಗೆ ಕಲ್ಲುಗಣಿ ಗುತ್ತಿಗೆ ಸಂಖ್ಯೆ 762ನ್ನು ದಿನಾಂಕ 22.08.2005 ರಿಂದ 20 ವರ್ಷಗಳ ಅವಧಿಗೆ ಮಂಜೂರು ಮಾಡಲಾಗಿರುತ್ತದೆ. ಕಲ್ಲುಗಣಿ ಗುತ್ತಿಗೆದಾರರು ಗುತ್ತಿಗೆ ಪ್ರದೇಶದಲ್ಲಿ 37226 ಮೆಟ್ರಿಕ್ ಟನ್ ಹಾಗೂ ಗುತ್ತಿಗೆಯ ಹೊರ ಭಾಗದಲ್ಲಿ 16561 ಮೆಟ್ರಿಕ್ ಟನ್ ಸೇರಿ ಒಟ್ಟು 53787 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಉತ್ಪಾದಿಸಿ ಖನಿಜ ರವಾನೆ ಪರವಾನಿಗೆ ಇಲ್ಲದೆ ಸಾಗಾಣಿಕೆ ಮಾಡಿರುತ್ತಾರೆ. ಈ ಸಂಬಂಧ ಕಲ್ಲುಗಣಿ ಗುತ್ತಿಗೆದಾರರಿಗೆ ದಿನಾಂಕ 15.05.2019 ರಂದು ನೋಟೀಸ್ ಜಾರಿ ಮಾಡಲಾಗಿರುತ್ತದೆ.<br>2. ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಹೊಣಕೆರೆ ಹೋಬಳಿ, ಗಂಗಸಮುದ್ರ ಗ್ರಾಮದ ಎಲ್ಲೆ ವ್ಯಾಪ್ತಿಯ ಸರ್ವೆ ನಂ. 143ರ 1-20 ಎಕರೆ ಸರ್ಕಾರಿ ಪ್ರದೇಶದಲ್ಲಿ ಶ್ರೀ ಷಣ್ಮುಗಂ ಬಿ. ಬಿನ್ ಲೇಟ್ ಬೆಳ್ಳಿಯಪ್ಪ ಇವರಿಗೆ ಕಲ್ಲುಗಣಿ ಗುತ್ತಿಗೆ ಸಂಖ್ಯೆ 602 ನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಗುತ್ತಿಗೆಯ ಅವಧಿಯು ದಿನಾಂಕ 31.03.2020ಕ್ಕೆ ಮುಕ್ತಾಯವಾಗಿರುತ್ತದೆ. |

| | | |
|---|---|---|
| | | ಕಲ್ಲುಗಣಿ ಗುತ್ತಿಗೆದಾರರು ಗುತ್ತಿಗೆ ಪ್ರದೇಶದಲ್ಲಿ 10475 ಮೆಟ್ರಿಕ್ ಟನ್ ಹಾಗೂ ಗುತ್ತಿಗೆಯ ಹೊರ ಭಾಗದಲ್ಲಿ 4186 ಮೆಟ್ರಿಕ್ ಟನ್ ಸೇರಿ ಒಟ್ಟು 14661 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಉತ್ಪಾದಿಸಿ ಖನಿಜ ರವಾನೆ ಪರವಾನಿಗೆ ಇಲ್ಲದೆ ಸಾಗಾಣಿಕೆ ಮಾಡಿರುತ್ತಾರೆ. ಈ ಸಂಬಂಧ ಕಲ್ಲುಗಣಿ ಗುತ್ತಿಗೆದಾರರಿಗೆ ದಿನಾಂಕ 15.05.2019 ರಂದು ನೋಟೀಸ್ ಜಾರಿ ಮಾಡಲಾಗಿರುತ್ತದೆ. |
| ಆ) | ಸುತ್ತ ಮುತ್ತಲ ಗ್ರಾಮಗಳ ಗೊಲ್ಲರಹಳ್ಳಿ ಬಂಕಾಪುರ ಪಡುವಲಪಟ್ಟಣ ಗ್ರಾಮಗಳ ಜನರಿಗೆ ಈ ಅಕ್ರಮ ಗಣಿಗಾರಿಕೆಯಿಂದ ಮನೆಗಳು ಶಿತಲಗೊಂಡಿರುವುದು ಹಾಗೂ ಮುಖ್ಯರಸ್ತೆಗಳು ಹದಗೆಟ್ಟಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಾರ್ವಜನಿಕರು ದೂರು ನೀಡಿದರು ಯಾವುದೇ ಕ್ರಮಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು). | ಗೊಲ್ಲರಹಳ್ಳಿ ಬಂಕಾಪುರ, ಪಡುವಲಪಟ್ಟಣ ಗ್ರಾಮಗಳ ಜನರಿಗೆ ಈ ಅಕ್ರಮ ಗಣಿಗಾರಿಕೆಯಿಂದ ಮನೆಗಳು ಶಿಥಿಲಗೊಂಡಿರುವುದು ಹಾಗೂ ಮುಖ್ಯ ರಸ್ತೆಗಳು ಹದಗೆಟ್ಟಿರುವ ಬಗ್ಗೆ ಸಾರ್ವಜನಿಕರಿಂದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಚೇರಿಯಲ್ಲಿ ದೂರು ಸ್ವೀಕೃತಗೊಂಡಿರುವುದಿಲ್ಲ. |

ಸಂಖ್ಯೆ ಸಿಐ 32 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

## ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ

### ಅಧಿಸೂಚನೆ

ಸಂಖ್ಯೆ ಎಂಎಸ್‌ಸಿ(1)/185/2009-10 ದಿನಾಂಕ: 31.10.2012

ವಿಷಯ: ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011 ರಂತೆ ಕಲ್ಲುಪುಡಿ ಮಾಡುವ ಘಟಕಗಳಿಗೆ ಸುರಕ್ಷಿತ ವಲಯದ ಘೋಷಣೆ ಸಂಬಂಧವಾಗಿ.

ಉಲ್ಲೇಖ:1. ದಿನಾಂಕ: 11.10.2012 ರಂದು ನಡೆದ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಸಮಿತಿ ಸಭೆಯ ನಡಾವಳಿಗಳು.

2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪತ್ರಸಂಖ್ಯೆ:128/PCB-81/MIN/2012-13/4246+4248. ದಿನಾಂಕ:20.10.2012.
3. ಉಪಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಪತ್ರಸಂಖ್ಯೆ: ಸಿ1/ಜಲ್ಲಿಕ್ರಷರ್/ಸ್ಥಳಾಂತರ/ಸಿಆರ್-64/2011-12 ದಿನಾಂಕ: 11.10.2012.
4. ಹಿರಿಯ ಭೂವಿಜ್ಞಾನಿ (ಖನಿಜ), ಇವರ ಕಛೇರಿ ಪತ್ರಸಂಖ್ಯೆ: ಗಭೂಇ/ಹಿಭೂವಿ/ಕ್ರಷರ್/2012-13 ದಿನಾಂಕ: 31.10.2012.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ 2011 ನಿಯಮ 6(5)ರಂತೆ ಈ ಕೆಳಗೆ ನಮೂದಿಸಿರುವ ಪ್ರದೇಶಗಳಲ್ಲಿ ಕಲ್ಲುಪುಡಿ ಮಾಡುವ ಘಟಕಗಳನ್ನು (ಕ್ರಷರ್‌ಗಳನ್ನು) ಸ್ಥಾಪಿಸಲು ಉಲ್ಲೇಖ (1) ಮತ್ತು (2) ರಂತೆ ಸುರಕ್ಷಿತ ವಲಯವೆಂದು ಗುರುತಿಸಿದ್ದು, ಇದನ್ನು ಸಾರ್ವಜನಿಕರ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಕಲ್ಲುಪುಡಿ ಮಾಡುವ ಘಟಕಗಳನ್ನು ನಡೆಸುವವರು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ 2011 ರ ನಿಯಮ 3(1) ರ ಅನುಸಾರ ಲೈಸೆನ್ಸ್‌ನ್ನು ಪಡೆಯಬೇಕಾಗಿದೆ. ನಿಯಮ 3(2)ರಂತೆ ಈ ಅಧಿನಿಯಮ ಪ್ರಾರಂಭವಾದ ದಿನಾಂಕದಂದು ಯಾವುದೇ ಪ್ರಾಧಿಕಾರದಿಂದ ನೀಡಲಾದ ಲೈಸೆನ್ಸ್‌ನೊಂದಿಗೆ ಕಲ್ಲುಪುಡಿ ಮಾಡುವ ಘಟಕ ವ್ಯವಹಾರವನ್ನು ನಡೆಸುತ್ತಿರುವ ಯಾವೊಬ್ಬ ವ್ಯಕ್ತಿಯು ಮೂರು ತಿಂಗಳೊಳಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಲೈಸೆನ್ಸ್ ದೊರೆತ ಮೇಲೆ ತಮ್ಮ ಅಸ್ತಿತ್ವದಲ್ಲಿರುವ ಕಲ್ಲುಪುಡಿ ಮಾಡುವ ಘಟಕವನ್ನು ಆರು ತಿಂಗಳೊಳಗಾಗಿ ಸುರಕ್ಷಿತ ವಲಯಕ್ಕೆ ಸ್ಥಳಾಂತರಿಸತಕ್ಕದ್ದು.

ಕಲ್ಲುಪುಡಿ ಮಾಡುವ ವ್ಯವಹಾರಗಳನ್ನು ಕೈಗೊಳ್ಳಲು ಲೈಸೆನ್ಸ್ ಮಂಜೂರಾತಿಗಾಗಿ ಅಗತ್ಯ ದಸ್ತಾವೇಜುಗಳು ಮತ್ತು ನಿಗದಿತ ಶುಲ್ಕಗಳನ್ನು ಸದಸ್ಯ ಕಾರ್ಯದರ್ಶಿಗಳಾದ ಹಿರಿಯ ಭೂವಿಜ್ಞಾನಿಗಳು, ಖನಿಜ ವಿಭಾಗ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಡ್ಯ ಇವರಿಗೆ ಸಲ್ಲಿಸತಕ್ಕದ್ದು.

ಲೈಸೆನ್ಸ್ ಮಂಜೂರಾತಿ ಅಥವಾ ನಿರಾಕರಣೆಯನ್ನು ಸ್ಥಳ ಪರಿಶೀಲನೆ, ಲೈಸೆನ್ಸ್‌ನ ಇತರೆ ಷರತ್ತುಗಳ ನೆರವೇರಿಕೆಯ ಬಗ್ಗೆ ಯುಕ್ತ ಸತ್ಯಾಪನೆಯ ತರುವಾಯ ಮಾಡಲಾಗುವುದು. ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳಿಗಾಗಿ (ಕ್ರಷರ್‌ಗಳಿಗಾಗಿ) ಗುರುತಿಸಿರುವ ಸುರಕ್ಷಿತ ವಲಯಗಳ ವಿವರಗಳು ಈ ಕೆಳಕಂಡಂತಿವೆ.

ಮಂಡ್ಯ ಜಿಲ್ಲೆಯಲ್ಲಿ ಗುರ್ತಿಸಿರುವ ಸುರಕ್ಷತಾ ವಲಯಗಳು

| ಕ್ರಮ ಸಂಖ್ಯೆ | ತಾಲ್ಲೂಕು | ಗ್ರಾಮ | ಸರ್ವೆ ನಂ. | ವಿಸ್ತೀರ್ಣ | ಜಮೀನಿನ ವರ್ಗೀಕರಣ |
|---|---|---|---|---|---|
| 1 | ನಾಗಮಂಗಲ | ಗಂಗಸಮುದ್ರ | 143 | 59-00 ಎಕರೆ | ಸರ್ಕಾರಿ ಗೋಮಾಳ |
| 2 | ಕೆ.ಆರ್.ಪೇಟೆ | ಶಿವಪುರ | 10 | 15-00 ಎಕರೆ | ಸರ್ಕಾರಿ ಗೋಮಾಳ |

ಈ ಮೇಲ್ಕಂಡ ಎರಡು ಕಲ್ಲುಪುಡಿ ಮಾಡುವ (ಕ್ರಷರ್) ಘಟಕ ಸ್ಥಾಪನೆಗೆ ಸುರಕ್ಷತಾ ವಲಯವೆಂದು ಗುರುತಿಸಿದ್ದು, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆಗಳು ಒಪ್ಪಿಗೆಯನ್ನು ಸೂಚಿಸಿರುತ್ತಾರೆ. ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ವಿಧಿಸಿರುವ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. Action shall be initiated to develop the Safer Zones completely in a proper manner before starting the allocation of land to the applicants. There shall not be construction of any building or other structures within 1 Km radius from the boundary of Safer Zone.
2. Buffer zone shall be maintained from the boundary of Agricultural land/Forest (lands are adjacent to the proposed safer zone).
3. Action shall be initiated to construct an appropriate boundary around it and there shall be planting of tall growing foliage bearing perennial trees all along the boundaries. At least five such rows of tall growing leafy-tress shall form a curtain to the surrounding area so that there is no escape of dust particles to its surrounding limits.

1 :JD SZ DMG MYSORE FAX NO. :0821 2343045 17 Nov. 2012 4:00PM P3



4. Each Stone Crusher shall be allocated with a minimum of 1 Acre of land in the Zone as per the requirement of the Karnataka Regulation of Stone Crushers Act.

5. Link roads and internal roads within the Safer Zone shall be properly [illegible] maintained so that fugitive emissions are reduced. The ambient air quality in the Zone shall conform to the National Ambient Air Quality Standards as per the Environment (Protection) Seventh Amendment Rules, 2009.
6. The entire area shall have planned rain water harvesting system so that the [illegible] self reliant as far as water requirement is concerned.
7. This Notification is subject to any judgment/s of the Hon'ble Supreme Court or the High Court or any Other Courts that may be pronounced from time to time in the matter of Safer Zone.

ಪಿ.ಆರ್. 563 ಬಿ.ಪ್ರ (10)

ಜಿಲ್ಲಾಧಿಕಾರಿಗಳು
ಮಂಡ್ಯ ಜಿಲ್ಲೆ, ಮಂಡ್ಯ

CT 32 MMN 2021

31/10

Deputy Director (Min. Admn)
Dept. of Mines & Geology
Bangalore-560001